**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಲಕ್ಷ್ಮಣ ಸ. ಸವದಿ, ಇವರು ನಿಯಮ-330ರಡಿ ಮಂಡಿಸಿರುವ ಸಾರ್ವಜನಿಕ ಮಹತ್ತರ ಜರೂರಾದ ವಿಷಯ.**

********

**ವಿಷಯ:**

ರಾಜ್ಯದಲ್ಲಿರುವ ಮಾಳಿ ಮಾಲಗರ ಸಮುದಾಯಕ್ಕೆ ಸೇರಿದ ಸುಮಾರು 25 ರಿಂದ 30 ಲಕ್ಷ ಜನರಿಗೆ ಹಿಂದುಳಿದ ವರ್ಗಗಳ ಪ್ರವರ್ಗ-IIA ಜಾತಿ ಪ್ರಮಾಣ ಪತ್ರವನ್ನು ವಿತರಿಸುವಲ್ಲಿ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿ ಉಂಟಾಗಿರುತ್ತದೆ. ಈ ಮಾಳಿ ಮಾಲಗರ ಸಮುದಾಯಕ್ಕೆ ಸೇರಿದ ಪೂರ್ವಿಕರು ತಮ್ಮ ಜಾತಿ ಪ್ರಮಾಣ ಪತ್ರವನ್ನು ಪಡೆಯುವ ಸಂದರ್ಭದಲ್ಲಿ ಲಿಂಗವಂತ ಎಂದು ನಮೂದಿಸುತ್ತಿದ್ದರಿಂದಾಗಿ, ಪ್ರಸ್ತುತ ಸಮುದಾಯದ ಸಾರ್ವಜನಿಕರು ಜಾತಿ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಪೂರ್ವಿಕರ ದಾಖಲಾತಿಗಳನ್ನು ಸಲ್ಲಿಸುವಂತೆ ತಹಸೀಲ್ದಾರ್ ರವರು ಸೂಚಿಸುತ್ತಿರುವುದರಿಂದ  ಸಮುದಾಯದವರಿಗೆ ಜಾತಿ ಪ್ರಮಾಣ ಪತ್ರ ಪಡೆಯಲು ಕಷ್ಟ ಸಾಧ್ಯವಾಗುತ್ತಿದೆ.

ಹಾವನೂರು ವರದಿಯನ್ವಯ ಮಾಳಿ-ಮಾಲಗಾರ ಸಮುದಾಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ-IIA ಗೆ ಈಗಾಗಲೇ ಸೇರಿಸಲಾಗಿರುತ್ತದೆ. ಅದರನ್ವಯ ಮಾಳಿ-ಮಾಲಗರ ಸಮುದಾಯಕ್ಕೆ ಪ್ರವರ್ಗ-IIA ಜಾತಿ/ಸಿಂಧುತ್ವ ಪ್ರಮಾಣ ಪತ್ರ ನೀಡಿರುವುದರಿಂದ  ಸಮುದಾಯವು ಶೈಕ್ಷಣಿಕವಾಗಿ ಆರ್ಥಿಕವಾಗಿ ಸಬಲಗೊಳ್ಳಲು ಅವಕಾಶ ಕಲ್ಪಿಸಿದಂತಾಗುತ್ತದೆ.

ಆದುದರಿಂದ, ಕೂಡಲೇ ಮಾಳಿ ಮಾಲಗರ ಸಮುದಾಯದವರಿಗೆ ಪ್ರವರ್ಗ-IIA ಜಾತಿ/ಸಿಂಧುತ್ವ ಪ್ರಮಾಣ ಪತ್ರವನ್ನು ನೀಡುವಲ್ಲಿ ಸಮಿತಿ ರಚನೆ ಮಾಡಿ, ತಹಸೀಲ್ದಾರ್, ಹಿಂದುಳಿದ ವರ್ಗಗಳ ಅಧಿಕಾರಿಗಳಿಂದ ಪಂಚನಾಮೆ ಮಾಡಿ ಹಾವನೂರು ವರದಿಯನ್ವಯ ಮಾಳಿ-ಮಾಲಗರ ಸಮುದಾಯಕ್ಕೆ ಪ್ರವರ್ಗ-IIA ಜಾತಿ/ಸಿಂಧುತ್ವ ಪ್ರಮಾಣ ಪತ್ರವನ್ನು ವಿತರಿಸುವಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಗಮನ ಸೆಳೆದಿರುವ ಕುರಿತು.

**<u>ಹೇಳಿಕೆ:</u>**

ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002ರ ಪ್ರವರ್ಗ-IIA ಕ್ರಮ ಸಂಖ್ಯೆ: 40 ರಡಿಯಲ್ಲಿ ಮಾಳಿ-ಮಾಲಗಾರ್ ಜಾತಿಗಳನ್ನೊಳಗೊಂಡಂತೆ ಒಟ್ಟು 10 ಜಾತಿಗಳನ್ನು ಸೇರಿಸಲಾಗಿರುತ್ತದೆ. ಸದರಿ ಜಾತಿ/ಸಮುದಾಯಗಳು ಭಾರತ ಸಂವಿಧಾನದ ಅನುಚ್ಛೇಧ 15(4) ಮತ್ತು 16(4) ರಡಿಯಲ್ಲಿ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶ ಹಾಗೂ ನೇಮಕಾತಿಗಳಲ್ಲಿ ಶೇಕಡ 15 ರಷ್ಟು ಮೀಸಲಾತಿ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.

ಆದರೆ, ಲಿಂಗವಂತ ಮಾಳಿ-ಮಾಲಗಾರ  ಜಾತಿಯು ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002ರ ಹಿಂದುಳಿದ ವರ್ಗಗಳ ಜಾತಿ ಪಟ್ಟಿಯಲ್ಲಿ ಸೇರಿರುವುದಿಲ್ಲ.

ಮುಂದುವರೆದು, ಲಿಂಗವಂತ ಮಾಳಿ-ಮಾಲಗಾರ ಜಾತಿ/ಸಮುದಾಯವು, ಮನವಿ ಸಲ್ಲಿಸಿ, ಹುಗಾರ, ಹೂಗಾರ, ಮಾಲಗಾರ, ಮಾಳಿ, ಫೂಲ-ಮಾಳಿ, ಫುಲ-ಮಾಳಿ,

ಪುಲಾರಿ, ಫೂಲಾರಿ, ಜೀರ, ಗೊರವ, ಗುರವ ಜಾತಿಗಳು ಲಿಂಗಾಯತ ಜಾತಿಯ ಒಳಪಂಗಡಗಳೆಂದು ಇವುಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ-1 ರ ಹಾಗೂ ಪ್ರವರ್ಗ-2ಎ ರಡಿ ಸೇರ್ಪಡೆ ಮಾಡುವ ಕುರಿತು ಶ್ರೀ ಹೆಚ್. ಕಾಂತರಾಜ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಬಹಿರಂಗ ವಿಚಾರಣೆ ನಡೆಸಿ ಸದರಿ ಮನವಿಗಳನ್ನು ತಿರಸ್ಕರಿಸಲು ಸರ್ಕಾರಕ್ಕೆ ಸಲಹೆ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ಲಿಂಗವಂತ ಮಾಳಿ-ಮಾಲಗಾರ ಜಾತಿ/ಸಮುದಾಯಕ್ಕೆ ಸಮಿತಿ ರಚಿಸಿ ಜಾತಿ ಪ್ರಮಾಣ ಪತ್ರವನ್ನು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

**ಸಂಖ್ಯೆ**:ಹಿಂವಕ 176 ಬಿಸಿಎ 2022

**(ಕೋಟಾ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು

330 63